ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 12
Issue - 1
Pages - 24
₹ - 12
January - 2014



**ಜನವರಿ 1**
**ರಾಜ್ಯದಾದ್ಯಂತ**
**ಸೌಹಾರ್ದ ಸಹಕಾರಿ ದಿನಾಚರಣೆ**

**ಜನವರಿ 12 – ಸ್ವಾಮಿ ವಿವೇಕಾನಂದರ**
**150ನೇ ವರ್ಷಾಚರಣೆ**



**ಮಡಿಕೇರಿಯಲ್ಲಿ 80ನೇ ಅಖಿಲ ಭಾರತ**
**ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ**





**ಹೊಸ ವರ್ಷ, ಈದ್ ಮಿಲಾದ್, ಸಂಕ್ರಾಂತಿ,**
**ಗಣರಾಜ್ಯೋತ್ಸವದ ಶುಭಾಷಯಗಳು**

ಸೌಹಾರ್ದ ಸಹಕಾರಿಗಳ ಸಂಖ್ಯೆ : 2662 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 559

ಅಧ್ಯಕ್ಷರ ಮಾತು



“ಪ್ರತಿವರ್ಷದ ಕಾರ್ಯಚಟುವಟಿಕೆಗಳ ಜೊತೆಗೆ ಪ್ರಸ್ತುತ ವರ್ಷದಲ್ಲಿ ಸಂಯುಕ್ತ ಸಹಕಾರಿಯು, ಹೆಚ್ಚುವರಿಯಾಗಿ ಸದಸ್ಯರ ತರಬೇತಿ, ಮಹಿಳಾ ತರಬೇತಿ ಹಾಗೂ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವಿಷಯಾಧಾರಿತ 3 ದಿನಗಳ ತರಬೇತಿ ಕಾರ್ಯಕ್ರಮಮಗಳನ್ನು ಹೊಸದಾಗಿ ಪ್ರಾರಂಭಿಸಿದೆ.”

# ನೂತನ ವರ್ಷ 2014ರಲ್ಲಿ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಇಮ್ಮಡಿಯಾಗಲು ಶ್ರಮಿಸೋಣ

ಸಮಸ್ತ ಸಹಕಾರಿ ಬಾಂಧವರಿಗೆ ನೂತನ ವರ್ಷ 2014 ಹಾಗೂ ಮಕರ ಸಂಕ್ರಾಂತಿಯ ಶುಭ ಹಾರೈಕೆಗಳು. ಸೌಹಾರ್ದ ಸಹಕಾರಿ ಕ್ಷೇತ್ರ ತನ್ನ 13 ವಸಂತಗಳನ್ನು ಕಳೆದು 14 ನೇಯ ವಸಂತಕ್ಕೆ ಕಾಲಿರಿಸಿದೆ. ಈ ದೇಶದ ಈ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಹೊಸ ಸಂದೇಶವನ್ನು ಸಾರುವಲ್ಲಿ ಸಫಲತೆಯನ್ನು ಕಾಣುತ್ತಿದೆ. ಮಕರ ಸಂಕ್ರಾಂತಿಯು ಬಾಳಿನಲ್ಲಿ ಸಿಹಿ–ಕಹಿಗಳನ್ನು ಸಂತೋಷದಿಂದ ಸ್ವೀಕರಿಸುವಂತೆ ಸೌಹಾರ್ದ ಸಹಕಾರಿ ಕ್ಷೇತ್ರವೂ ಸಹ ಅನೇಕ ಸವಾಲುಗಳನ್ನು ಎದುರಿಸಿ ಪ್ರಗತಿ ಪಥ ದತ್ತ ದಾಪುಗಾಲು ಹಾಕುತ್ತಿರುವುದು ಸೌಹಾರ್ದ ಸಹಕಾರಿಗಳ ಮನೋಬಲಕ್ಕೆ ಸಾಕ್ಷಿ ಎನಿಸಿದೆ.

ಸೌಹಾರ್ದ ಸಹಕಾರಿ ಕ್ಷೇತ್ರ ಕಳೆದ 13 ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಜನತೆ, ಸಹಕಾರಿ ನಾಯಕರು ಹಾಗೂ ಸರಕಾರಗಳಲ್ಲಿ ಮೆಚ್ಚುಗೆ ಪಡೆದಿದೆ. 109 ವರ್ಷಗಳ ಇತಿಹಾಸವಿರುವ ಸಹಕಾರಿ ಸಂಸ್ಥೆಗಳು ಸಾಧಿಸದ ಪ್ರಗತಿಯನ್ನು ಈ ಕ್ಷೇತ್ರ ಕೇವಲ 12 ವರ್ಷಗಳಲ್ಲಿ ಸಾಧಿಸಿರುವುದು ಶ್ಲಾಘನೀಯ ಹಾಗೂ ಅಭಿನಂದನೀಯ. ಹಳೆಯ ಕಾಯ್ದೆಯಿಂದ ಈ ಕ್ಷೇತ್ರಕ್ಕೆ ಪರಿವರ್ತನೆಯಾಗುತ್ತಿರುವ ಸಹಕಾರಿ ಸಂಸ್ಥೆಗಳ ಸಂಖ್ಯೆ ಕಡಿಮೆಯಿರಬಹುದು. ಅದಕ್ಕೆ ಕಾಯ್ದೆಯಲ್ಲಿನ ಕೆಲವು ಅಡೆತಡೆಗಳು ಕಾರಣ ಎಂಬುದು ತಮಗೆಲ್ಲ ತಿಳಿದ ವಿಷಯ. ಆದರೆ ಯುವ ಪೀಳಿಗೆಯ ಹೊಸ ಸೌಹಾರ್ದ ಸಹಕಾರಿಗಳ ಸಂಖ್ಯೆ ಪ್ರತಿವರ್ಷ ಸರಾಸರಿ 350 ರಿಂದ 400 ಇದ್ದು ದಿನೇ ದಿನೇ ಹೆಚ್ಚುತ್ತಲಿರುವುದು ಸೌಹಾರ್ದ ಸಹಕಾರಿ ಕಾಯ್ದೆಯ ಜನಪ್ರಿಯತೆಯಿಂದಾಗಿ ಎಂದು ವಿಶ್ಲೇಷಿಸಬಹುದು. ಜನಸಾಮಾನ್ಯರು ಸಹಕಾರಿ ಕ್ಷೇತ್ರದ ಮೂಲಕ ತಮ್ಮ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಹೆಚ್ಚು ಸ್ವಾಯತ್ತತೆಯನ್ನು ಅಪೇಕ್ಷಿಸುವುದು ಸಹಜ. ಈ ಸ್ವಾತಂತ್ರ ಅವರಿಗೆ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಲಭ್ಯವಿದೆ. 1959ರ ಕಾಯ್ದೆಗೂ ಸಹ 1997ರ ಸಂವಿಧಾನ ತಿದ್ದುಪಡಿಯನ್ವಯ ಸಾಕಷ್ಟು ಸ್ವಾತಂತ್ರವಿದೆ. ಕೆಲವು ವಿಷಯಗಳಲ್ಲಿ ಆಡಳಿತದಲ್ಲಿ ಸರಕಾರದ ಹಸ್ತಕ್ಷೇಪಕ್ಕೆ ಇನ್ನೂ ಅವಕಾಶವಿಟ್ಟುಕೊಂಡಿರುವುದು ಯುವಜನತೆ ಸೌಹಾರ್ದ ಸಹಕಾರಿ ಕಾಯ್ದೆಯತ್ತ ಒಲವು ತೋರಿಸುತ್ತಿರುವುದಕ್ಕೆ ಕಾರಣವೆನಿಸುತ್ತದೆ.

1997ರ ಸಂವಿಧಾನ ತಿದ್ದುಪಡಿಗಳ ಅಳವಡಿಸುವ ಸಮಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕೆಲವು ತೊಂದರೆಗಳು ಉಂಟಾಗಿರುವುದು ಸರಿ. ಇವುಗಳ ನಿವಾರಣೆಗಾಗಿ ಸಂಯುಕ್ತ ಸಹಕಾರಿಯು ನಿರಂತರ ಪ್ರಯತ್ನ ನಡೆಸುತ್ತಲೆ ಇದೆ. ಶೀಘ್ರದಲ್ಲಿಯೆ ಈ ತೊಂದರೆಗಳ ನಿವಾರಣೆಯಾಗುವ ಸಾಧ್ಯತೆಗಳಿವೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಈ ಪ್ರಯತ್ನಕ್ಕೆ ಕೈಜೋಡಿಸುವುದು ಅಗತ್ಯ. ಜೊತೆಗೆ ತಮ್ಮ ಸಹಕಾರಿಯ ಸಂಪರ್ಕದಲ್ಲಿರುವ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಲೋಕಸಭಾ ಸದಸ್ಯರುಗಳಿಗೆ ಈ ಬಗ್ಗೆ ಮನವರಿಕೆಮಾಡಿಸಿ ಸಂಪೂರ್ಣ ಸ್ವಾಯತ್ತತೆ ಈ ಕ್ಷೇತ್ರದಲ್ಲಿ ಅಗತ್ಯ. ಈ ನಿಟ್ಟಿನಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿ ಅಗತ್ಯ ಇದಕ್ಕೆ ಸರಕಾರದ ಪ್ರೋತ್ಸಾಹ ಅವಶ್ಯಕ ಎಂಬುದನ್ನು ಪ್ರತಿಪಾದಿಸುವ ವ್ಯವಸ್ಥೆ ಅಗತ್ಯ ಎಂಬ ಬಗ್ಗೆ ತಾವುಗಳು ಪ್ರಯತ್ನ ಮುಂದುವರೆಸುವುದು ಅಗತ್ಯ.

ಪ್ರತಿಯೊಂದು ಸೌಹಾರ್ದ ಸಹಕಾರಿಯು ತನ್ನ ವ್ಯಾಪ್ತಿಯಲ್ಲಿ ಇನ್ನೊಂದು ಹೊಸ ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಿ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಈ ವರ್ಷದಲ್ಲಿ ಇಮ್ಮಡಿಯಾಗಿ ಬೆಳೆಯಲಿ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರಿಗೆ ಹೆಚ್ಚಿನ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮವಿಡಲಿ. ಸೌಹಾರ್ದ ಸಹಕಾರಿ ಕ್ಷೇತ್ರ ತನ್ನ ವೈಶಿಷ್ಟತೆ ಹಾಗೂ ವಿಭಿನ್ನತೆಯನ್ನು ಕಾಪಾಡಿಕೊಂಡು ಬರಲಿ. ರಾಜ್ಯದ ಹಾಗೂ ದೇಶದ ಇತರೆ ಸಹಕಾರಿ ಸಂಸ್ಥೆಗಳಿಗೆ ಮಾದರಿಯಾಗಿ ಅನುಕರಣೀಯವಾಗಲಿ. ಈ ನಿಟ್ಟಿನಲ್ಲಿ ನಾವೆಲ್ಲ ಕಾರ್ಯನಿರತರಾಗೋಣ. ಅಭಿವೃದ್ಧಿ ಸಾಧಿಸೋಣ.

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಂಪಾದಕೀಯ

## ಅಭಿವೃದ್ಧಿಯ ವಿಶ್ವಾಸ ಮೂಡಿಸಿದ ಚುನಾವಣಾ ಪೂರ್ವ ಸಿದ್ಧತಾ ಸಭೆ ಹಾಗೂ 2013ರ ಮುಖ್ಯಕಾರ್ಯ ನಿರ್ವಾಹಕರ ವಾರ್ಷಿಕ ಸಭೆಗಳು.



ಡಿಸೆಂಬರ್ 2013ರ ಮಾಹೆಯಲ್ಲಿ ರಾಜ್ಯದಾದ್ಯಂತ 24 ಕೇಂದ್ರಗಳಲ್ಲಿ 2014 ರಲ್ಲಿ ಆಡಳಿತ ಮಂಡಳಿಗೆ ಚುನಾವಣೆಗಳನ್ನು ನಡೆಸಬೇಕಿರುವ ಸಹಕಾರಿಗಳಿಗೆ ಚುನಾವಣಾ ಪೂರ್ವ ಸಿದ್ಧತಾ ಸಭೆ ಹಾಗೂ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಸಭೆಗಳನ್ನು ಏರ್ಪಡಿಸಲಾಗಿತ್ತು. ಕಾರಣಾಂತರದಿಂದ ಕಾರವಾರದಲ್ಲಿ ಸಭೆ ನಡೆಸಲಾಗಲಿಲ್ಲ. 23 ಸ್ಥಳಗಳಲ್ಲಿ ಸಭೆ ಅತ್ಯಂತ ಯಶಸ್ವಿಯಾಗಿ ನಡೆದಿವೆ. ಈ ಸಭೆಗಳಲ್ಲಿ ಮುಖ್ಯ ಕಾರ್ಯನಿರ್ವಾಹಕರ ಭಾಗವಹಿಸುವಿಕೆ ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿತ್ತು. ಒಟ್ಟಾರೆ 22 ಕೇಂದ್ರಗಳಲ್ಲಿ ನಡೆದ ಈ ಸಭೆಗಳಲ್ಲಿ 1,360 ಸೌಹಾರ್ದ ಸಹಕಾರಿಗಳಿಂದ 1,553 ಮುಖ್ಯ ಕಾರ್ಯನಿರ್ವಾಹಕರು ಹಾಗೂ ಇತರರು ಭಾಗವಹಿಸಿದ್ದರು.

ಒಂದೆರಡು ಕೇಂದ್ರಗಳಲ್ಲಿ ಭಾಗವಹಿಸುವಿಕೆಯ ಪ್ರಮಾಣ ಶೇಕಡಾ 50ರಷ್ಟಾದರೆ ಉಳಿದ ಎಲ್ಲಾ ಕೇಂದ್ರಗಳಲ್ಲಿ ಶೇಕಡಾ 75% ರಷ್ಟಿತ್ತು. ಸಭೆಗಳಲ್ಲಿ ಭಾಗವಹಿಸುವಿಕೆಯ ಪ್ರಮಾಣದಲ್ಲಿ ಪ್ರತಿವರ್ಷ ಹೆಚ್ಚುತ್ತಲಿದ್ದು ಮುಖ್ಯ ಕಾರ್ಯನಿರ್ವಾಹಕರಲ್ಲಿ ಕರ್ತವ್ಯಪ್ರಜ್ಞೆ ಪ್ರಮಾಣ ಬೆಳೆಯುತ್ತಿರುವುದು ಸಂತೋಷಕರ ಹಾಗೂ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಸಂತೊಷಕರ ಹಾಗೂ ಸ್ವಾಗತಾರ್ಹ.

ಈ ಸಭೆಗಳಲ್ಲಿ ರಾಜ್ಯದ ಸಹಕಾರಿ ಚುನಾವಣಾ ಆಯುಕ್ತರು ಸೇರಿದಂತೆ ಸಹಕಾರಿ ಇಲಾಖೆಯ ಅಧಿಕಾರಿಗಳು, ಸಹಕಾರಿ ಮುಖಂಡರು. ಸಂಯುಕ್ತ ಸಹಕಾರಿಯ ನಿರ್ದೇಶಕರುಗಳು ಹಾಗೂ ಪತ್ರಿಕಾ ಮಾಧ್ಯಮ ದವರುಗಳು ಸಕ್ರೀಯವಾಗಿ ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಿಗೆ ವ್ಯಾಪಕ ಪ್ರಚಾರ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆ.

ಸಭೆಗಳಲ್ಲಿ ಭಾಗವಹಿಸಿದ್ದ ಮುಖ್ಯ ಕಾರ್ಯನಿರ್ವಾಹಕರುಗಳು ಸಭೆಗೆ ನೀಡಿದ ಮಾಹಿತಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯ ಬಗ್ಗೆ ಸಂಯುಕ್ತ ಸಹಕಾರಿಗೆ ವಿಶ್ವಾಸ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಪ್ರಗತಿ ಪರಿಶೀಲನೆಯ ಜೊತೆಗೆ 1997ನೇ ಸಂವಿಧಾನ ತಿದ್ದುಪಡಿಯಾಧಾರಿತ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಹಾಗೂ ನಿಯಮಗಳ ರಚನೆಯ ನಂತರ ಬದಲಾಗಿರುವ ಕೆಲವು ಜವಾಬ್ದಾರಿಗಳನ್ನು ಶಾಸನಬದ್ಧ ಕಾರ್ಯಗಳನ್ನು ನಿರ್ವಹಿಸುವುದು ಅಗತ್ಯವೆಂಬುವ ಹಿನ್ನೆಲೆಯಲ್ಲಿ ಹಾಗೂ ತೆರಿಗೆಗಳಿಗೆ ಸಂಬಂಧಿಸಿದಂತೆ ಸನ್ನದು ಲೆಕ್ಕಪರಿಶೋಧಕರಿಂದ ಅಗತ್ಯ ಮಾಹಿತಿಗಳನ್ನು ತಿಳಿಯಪಡಿಸುವ ಕಾರ್ಯಕ್ರಮವನ್ನು ಎಲ್ಲ ಕೇಂದ್ರಗಳಲ್ಲಿ ಯಶಸ್ವಿಯಾಗಿ ನಿರ್ವಹಿಸಿರುವುದು ಬರುವ ವರ್ಷದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಹೆಚ್ಚು ಕ್ರೀಯಾಶೀಲರಾಗಿ ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗವನ್ನು ಹೆಚ್ಚಿಸಲು ಪೂರಕವಾಗಿದೆ ಎಂದು ಆಶಿಸಬಹುದಾಗಿದೆ. ■

## ಒಳ ಪುಟಗಳಲ್ಲಿ...


ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಉತ್ತಮ ವಾಗಿವೆ – ರಾಜಶ್ರೀ ಅಗಸರ .......... 4

ಅನಿಸಿಕೆಗಳು ಸ್ಫೂರ್ತಿದಾಯಕವಾಗಿವೆ; ತರಬೇತಿ ವ್ಯಾಪ್ತಿಯನ್ನು ಹೆಚ್ಚಿಸಲಾಗುವುದು – ಗುರುನಾಥ ಜ್ಯಾಂತಿಕರ .......... 6

ಸಹಕಾರದ ಕೊರತೆ ನೀಗಿಸುವ ಕಾರ್ಯ ಸಹಕಾರ ಕ್ಷೇತ್ರ ಯಶಸ್ವಿಯಾಗಿ ನಿರ್ವಹಿಸಬೇಕು – ಸೌಹಾರ್ದ ಸಹಕಾರ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ .......... 7

ಸೌಹಾರ್ದ ಸಹಕಾರಿ ದಿನಾಚರಣೆ .......... 8

ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಕಛೇರಿ ಉದ್ಘಾಟನೆ .. 9

2014 ಜನವರಿ ತಿಂಗಳಿನ ಅಧ್ಯಕ್ಷರ ಪ್ರವಾಸದ ವಿವರ .......... 10

ಸೌಹಾರ್ದ ಸಹಕಾರಿಗಳ ಅಂತರರಾಜ್ಯ ಗೋವಾ ಮಹಾರಾಷ್ಟ್ರ ಹಾಗು ಗುಜರಾತ್ ರಾಜ್ಯಗಳ ಅಧ್ಯಯನ ಪ್ರವಾಸ ಕಾರ್ಯಕ್ರಮ – ಫೆಬ್ರವರಿ 2014 ಹೆಸರು ನೊಂದಾಯಿಸಲು ಸೂಚನೆ .......... 11

ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿ ಯವರಿಗಾಗಿ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಶಿಬಿರಾರ್ಥಿಗಳ ಅನಿಸಿಕೆ .......... 12

ರಾಜ್ಯದಾದ್ಯಂತ 23 ಕೇಂದ್ರಗಳಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಯಶಸ್ವಿ ಸಭೆ .......... 14

ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾಯ್ದೆಗಳು : ಆದಾಯತೆರಿಗೆ ಕಾಯ್ದೆ, 1962 .......... 21

ಸಂಕ್ರಾಂತಿಯು ಬದಲಾವಣೆಯ ದ್ಯೋತಕ .......... 23

## ಗುಲ್ಬರ್ಗಾ ಜಿಲ್ಲೆಯ ಮೈರಾಡಾದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ

# ಸೌಹಾರ್ದ ಸಹಕಾರಿ ಸಂಸ್ಥೆಗಳ ಕಾರ್ಯಚಟುವಟಿಕೆಗಳು ಉತ್ತಮವಾಗಿವೆ – ರಾಜಶ್ರೀ ಅಗಸರ

ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿ ಯವರಿಗಾಗಿ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 10ನೇ ತಂಡವನ್ನು ಪ್ರಕೃತಿ ಜ್ಞಾನಕೇಂದ್ರ ಮೈರಾಡಾದಲ್ಲಿ ಉದ್ಘಾಟಿಸಿದ ಗುಲ್ಬರ್ಗಾ ವಿಭಾಗೀಯ ಜಂಟಿ ನಿಬಂಧಕರಾದ ಶ್ರೀಮತಿ ರಾಜಶ್ರೀ ಅಗಸರರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಹಳೆಯ ಕಾಯ್ದೆಗಿಂತಲೂ ಭಿನ್ನವಾದ ಚಟುವಟಿಕೆಗಳನ್ನು ಸೌಹಾರ್ದ ಸಹಕಾರಿಗಳು ರೂಢಿಸಿಕೊಂಡಿರುವುದು ಸಹಕಾರಿ ಕ್ಷೇತ್ರದ ಪ್ರಗತಿಗೆ ಪೂರಕವಾಗಿವೆ. ವಿಶೇಷವಾಗಿ ಸಂಯುಕ್ತ ಸಹಕಾರಿಯು ಅನೇಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇದೆ. ಆದರೆ ನನಗೆ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಇವತ್ತಿನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು ನನಗೆ ವಿಶೇಷವಾಗಿ ಸಂತೋಷವನ್ನುಂಟುಮಾಡಿದೆ. ಭಾಗವಹಿಸಿರದಿದ್ದರೆ ಏನನ್ನೂ ಕಳೆದು ಕೊಂಡಂತಾಗುತ್ತಿತ್ತು ಎಂದು ತಿಳಿಸಿದ ಜಂಟಿ ನಿಬಂಧಕರು ಸಂಯುಕ್ತ ಸಹಕಾರಿಯ ತರಬೇತಿಗಳ ಗುಣಮಟ್ಟ ಉತ್ತಮವಾಗಿದೆ ಹೆಚ್ಚಿನ ಸೌಹಾರ್ದ ಸಹಕಾರಿಗಳು ಇವುಗಳ ಪ್ರಯೋಜನ ಪಡೆಯಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ಅನೇಕ ವಿಧವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ಯಾರಿಗೆ ಯಾವ ರೀತಿಯ ತರಬೇತಿಯಲ್ಲಿ ಭಾಗವಹಿಸಲು ಸಾಧ್ಯವಿದೆಯೊ ಅಂತಹ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ



ಮಾಹಿತಿ ಪಡೆದು ಕಾರ್ಯನಿರ್ವಹಣೆಯಲ್ಲಿ ಪರಿಣತಿಯನ್ನು ಪಡೆದು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲು ಕರೆನೀಡಿದರು. ವಿಶೇಷವಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಶಿಬಿರದ ಇದು 10 ನೇ ತಂಡವಾಗಿದ್ದು ಇಂತಹ ತರಬೇತಿ ಕಾರ್ಯಕ್ರಮಗಳನ್ನು ಉತ್ತಮ ಪರಿಸರದಲ್ಲಿ, ಉತ್ತಮ ಪ್ರಚಲಿತ ವಿಷಯಗಳ ಆಯ್ಕೆಮಾಡಿ ತಜ್ಞ ಸಂಪನ್ಮೂಲ ವ್ಯಕ್ತಿಗಳ ಮುಖಾಂತರ ಉಪನ್ಯಾಸ ಒದಗಿಸುವುದರ ಜೊತೆಗೆ ಪ್ರಾಯೋಗಿಕಗಳ ಮೂಲಕ ಮಾಹಿತಿ ಪಡೆಯುವ ವಿಧಾನಗಳನ್ನು ಅಧ್ಯಯನ ಪ್ರವಾಸದ ಮೂಲಕ ಉತ್ತಮ ಸಹಕಾರಿ ಸಂಸ್ಥೆಗಳನ್ನು ಭೇಟಿಮಾಡಿ ಅಧ್ಯ ಯನ ಮಾಡಿ ಮಾಹಿತಿ ಪಡೆಯುವ ವ್ಯವಸ್ಥೆ ಇದಾಗಿದೆ. ಇದರ ಜೊತೆಗೆ ಯೋಗ ಶಿಕ್ಷಣ, ಆರೋಗ್ಯದ ಶಿಕ್ಷಣ, ಅಧ್ಯಾತ್ಮ ಚಿಂತನೆ, ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಿಕೆ, ಸಾಮೂಹಿಕ ಕಾರ್ಯಚಟುವಟಿಕೆಗಳು, ವೇದಿಕೆ

## ತರಬೇತಿಯ ವಿಷಯಗಳು

ಕಾರ್ಯಕ್ರಮದ ಅವಧಿಯಲ್ಲಿ ಸಹಕಾರ – ಸಹಕಾರ ಸಂಘ – ಸಹಕಾರ ತತ್ವ – ಸಹಕಾರ ಚಳುವಳಿ ನಡೆದುಬಂದ ದಾರಿ – ಸೌಹಾರ್ದ ಸಹಕಾರ ಕಾಯ್ದೆ – ಹಳೆಯ ಕಾಯ್ದೆ ಹಾಗೂ ಹೊಸ ಕಾಯ್ದೆಗಳ ವ್ಯತ್ಯಾಸಗಳು – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರಿ ಆಡಳಿತ – ಸಭೆಗಳು – ಸಭೆಗಳನ್ನು ನಡೆಸುವ ವಿಧಾನ – ಪ್ರಾಯೋಗಿಕ – ಲೆಕ್ಕಪತ್ರಗಳನ್ನು ಇಡುವ ವಿಧಾನ – ಪ್ರಾಯೋಗಿಕ – ಲೆಕ್ಕಪರಿಶೋಧನೆ – ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಸಂಗ್ರಹ – ಬಡ್ಡಿಯೇತರ ಆದಾಯ ಮೂಲಗಳ ನಿರ್ವಹಣೆ – ಕಚೇರಿ ಆಡಳಿತ – ಸಮಯ ನಿರ್ವಹಣೆ – ವ್ಯಕ್ತಿತ್ವ ವಿಕಸನದ ವಿವಿಧ ಆಯಾಮಗಳು – ಬಡ್ಜೆಟ್‌ಮತ್ತು ಕ್ರೀಯಾಯೋಜನೆ ಸಿದ್ಧಪಡಿಸುವುದು – ಪ್ರಾಯೋಗಿಕ ಮುಂತಾದ ವಿಷಯಗಳ ಬಗ್ಗೆ ಉಪನ್ಯಾಸ ವ್ಯವಸ್ಥೆಗಳನ್ನು ಮಾಡಲಾಗಿತ್ತು.

ನಿರ್ವಹಣೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಒದಗಿಸಿ ವ್ಯಕ್ತಿತ್ವ ವಿಕಸನದ ವಿವಿಧ ಆಯಾಮಗಳಲ್ಲಿ ತೊಡಗಿಸಿ ಅವರ ಸಂಸ್ಥೆಗೆ ಉತ್ತಮ ಆಸ್ತಿಯಾಗಿ ಹೊರಹೊಮ್ಮುವಂತೆ ಮಾಡುವುದಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷ ಶ್ರೀ ಸೋಮಶೇಖರ ಗೋನಾಯಕ ಅವರು ಇದೊಂದು ಉತ್ತಮ ತರಬೇತಿ ಕಾರ್ಯಕ್ರಮವಾಗಿದೆ. ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದ್ದೇನೆ. ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳುತ್ತಿರುವ ತರಬೇತಿ ಕಾರ್ಯಕ್ರಮಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿವೆ ಎಂದು ತಿಳಿಸಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ ಸೌಹಾರ್ದ ಸಹಕಾರಿಗಳಿಗೆ ಸದಸ್ಯತ್ವ ನೀಡುವುದಕ್ಕೆ ಯಾವುದೇ ನಿರ್ಬಂಧವಿರುವುದಿಲ್ಲ ಎಂದು ತಿಳಿಸಿದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಶಾಂತಿನಾಥ ಪಂಡಿತ,ಶ್ರೀ ವೈ.ಟಿ.ಪಾಟೀಲ, ಶ್ರೀ ಎಲ್.ಎಸ್. ಆನಂದ, ಶ್ರೀಮತಿ ಮಂಜುಳಾ ಪಾಟೀಲ್ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಸಹಾಯಕ ನಿಬಂಧಕ ಶ್ರೀ ಮಹಮ್ಮದ ಗುಲ್ಬರ್ಗಾ ಹಾಗೂ ಬೀದರ ಜಿಲ್ಲೆಗಳ ಸಹಕಾರಿ ಗಣ್ಯರುಗಳು ಹಾಗೂ ಅನೇಕ ಪತ್ರಿಕಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಶಿಬಿರಾರ್ಥಿ ಗಳಿಂದ ನಾಡಗೀತೆ ಹಾಗು ಸಾಮೂಹಿಕ ಸಹಕಾರ ಗೀತೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಸ್ವಾಗತ ಹಾಗೂ ಕಾರ್ಯಕ್ರಮದ ಪ್ರಾಸ್ತಾವಿಕ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ವೈ.ಕುಮಾರರವರು ವಂದಿಸಿದರು. ■

## ಶ್ಲಾಘನೀಯ ಹಾಗೂ ಅರ್ಥಪೂರ್ಣ ತರಬೇತಿ : ಪತ್ರಕರ್ತ ಹೃಷಿಕೇಶ ಬಹಾದ್ದೂರ ದೇಸಾಯಿ

ವ್ಯಕ್ತಿತ್ವ ವಿಕಸನ ತರಬೇತಿಕಾರ್ಯಕ್ರಮದ ಸಮಾರೋಪ ಭಾಷಣ ಮಾಡಿದ ಹಿಂದು ಪತ್ರಿಕೆಯ ಹಿರಿಯ ವರದಿಗಾರ ಹೃಷಿಕೇಶ ಬಹಾದ್ದೂರ ದೇಸಾಯಿಯವರು ಸೌಹಾರ್ದ ಸಹಕಾರಿಗಳು ಸಂಸ್ಥೆಗಳು ಸಹಕಾರಿಗಳ ಆಶೋತ್ತರಗಳಿಗೆ ಸ್ಪಂದಿಸುವ ಸಂಸ್ಥೆಗಳಾಗಿ ಬೆಳೆಯುತ್ತಿರುವುದು ಸಂತೋಷದ ವಿಷಯ. ಸ್ವಾಯತ್ತತೆಯನ್ನು ಅರ್ಥಪೂರ್ಣವಾಗಿ ಗ್ರಹಿಸಿಕೊಂಡು ತಾವುಗಳು ಸ್ಥಾಪಿಸಿಕೊಂಡಿರುವ ಸಹಕಾರಿ ಸಂಸ್ಥೆಗಳ ಆಡಳಿತವನ್ನು ತಾವೆ ನಿರ್ವಹಿಸುವ ಜೊತೆಗೆ ನಿಯಂತ್ರಣವನ್ನೂ ತಾವೇ ಮಾಡುತ್ತಿರುವುದು ಅತ್ಯಂತ ಹೆಮ್ಮೆಯ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಗೆ ನಾಂದಿಯಾಗಿದೆ. ಈ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಕಾಲಕ್ಕೆ ಅಗತ್ಯ ಮಾಹಿತಿಗಳನ್ನು ಒದಗಿಸುವ ಕಾರ್ಯವನ್ನು ಸಂಯುಕ್ತ ಸಹಕಾರಿಯು ಯಶಸ್ವಿಯಾಗಿ ನಿರ್ವಹಿಸುತ್ತಿರುವುದು ಸಂತೋಷದ ಹಾಗೂ ಅಭಿನಂದನೀಯವಾಗಿದೆ. ವಿಶೇಷವಾಗಿ ಇಂತಹ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳು ಅರ್ಥಪೂರ್ಣವಾಗಿವೆ ಎಂದು ತಿಳಿಸಿದರು.





## ಸಾಂಸ್ಕೃತಿಕ ಕಾರ್ಯಕ್ರಮಗಳು

ಶ್ರೀಮತಿ ಇಂದುಮತಿ ಸಾಲಿಮಠರವರಿಂದ ಹಾಸ್ಯ ಸಂಜೆ, ಶ್ರೀ ಎಡ್ವರ್ಡ್‌ರವರಿಂದ ಸುಗಮ ಸಂಗೀತ, ಅನಂತ ಚಿಂಚನಸೂರ ವೃಂದದವರಿಂದ ಭರತ ನಾಟ್ಯ, ರವಿ ಕುಲಕರ್ಣಿ ವೃಂದದವರಿಂದ ತಬಲಾ ವಾದನ, ಕುಮಾರಿ ಅನುಪಮಾರವರಿಂದ ಜಾನಪದ ನೃತ್ಯ, (ಫೋಕ್ ಡ್ಯಾನ್ಸ್) ಹಾಗೂ ವಿಶ್ವರಂಗ ಸಂಸ್ಥೆಯವರಿಂದ ಪದ್ಮ ಪಾಣಿ ಎಂಬ ಐತಿಹಾಸಿಕ ನಾಟಕಗಳನ್ನು ಏರ್ಪಡಿಸಲಾಗಿತ್ತು.

## ಅಧ್ಯಯನ ಪ್ರವಾಸ

ತರಬೇತಿಯ ಅಂಗವಾಗಿ ದಿ : 17-12-2013ರಂದು ಮಹಗಾವ್ ಸೌಹಾರ್ದ ಸಹಕಾರಿ, ಶ್ರೀ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ, ಗುಲ್ಬರ್ಗಾ, ಗುಲ್ಬರ್ಗಾ ಮಹಿಳಾ ಸೌಹಾರ್ದ ಸಹಕಾರಿ, ಪಂಡಿತ ದೀನದಯಾಳ ಸೌಹಾರ್ದ ಸಹಕಾರಿ ಹುಮ್ನಾಬಾದ್‌ಗಳಿಗೆ ಭೇಟಿ ನೀಡಿ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಗುಲ್ಬರ್ಗಾದ ಶ್ರೀ ಶರಣಬಸಪ್ಪ ದೇವಸ್ಥಾನ, ಬುದ್ಧ ವಿಹಾರ ಹಾಗೂ ಬಸವ ಕಲ್ಯಾಣದ ಬಸವ ದೇವಸ್ಥಾನಗಳಿಗೆ ಭೇಟಿ ನೀಡಲಾಯಿತು.

# ಅನಿಸಿಕೆಗಳು ಸ್ಫೂರ್ತಿದಾಯಕವಾಗಿವೆ; ತರಬೇತಿ ವ್ಯಾಪ್ತಿಯನ್ನು ಹೆಚ್ಚಿಸಲಾಗುವುದು - ಗುರುನಾಥ ಜ್ಯಾಂತಿಕರ

ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ಇದುವರೆಗೆ ರಾಜ್ಯದಾದ್ಯಂತ 10 ಉತ್ತಮ ಸ್ಥಳಗಳನ್ನು ಆಯ್ಕೆಮಾಡಿ ಇಂತಹ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮಗಳು ನಡೆಸಲಾಗಿದೆ. ಉತ್ತಮ ಪ್ರತಿಕ್ರಿಯೆ ಇದೆ. ಭಾಗವಹಿಸುವಿಕೆ ಚೆನ್ನಾಗಿದೆ. ತರಬೇತಿ ಪಡೆದವರು ತಮ್ಮ ದಕ್ಷತೆಯನ್ನು ಹೆಚ್ಚಿಸಿಕೊಂಡು ಕ್ರೀಯಾಶೀಲರಾಗಿ ಉತ್ತಮವಾಗಿ ಕಾರ್ಯನಿರ್ವಹಿಸುವ ಬಗ್ಗೆ ವರದಿಗಳು ಬಂದಿವೆ. ಹೀಗಾಗಿ ಮುಂದಿನ ದಿನಗಳಲ್ಲಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಒಂದೊಂದು ಕಾರ್ಯಕ್ರಮವನ್ನು ವಿಭಾಗವಾರು ನಡೆಸುವ ಬಗ್ಗೆ ಯೋಜಿಸಲಾಗುತ್ತಿದೆ. ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಅನಿಸಿಕೆಗಳು ಸಂಯುಕ್ತ ಸಹಕಾರಿಗೆ ಸ್ಫೂರ್ತಿದಾಯಕವಾಗಿವೆ ಎಂದು ತಿಳಿಸಿದರು.

ತರಬೇತಿಯಿಂದಲೇ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸಲು ಭೂಮಿಕೆಯನ್ನು ಸಿದ್ಧಪಡಿಸಿದಂತಾಗುತ್ತದೆ. ರಾಜ್ಯದಲ್ಲಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಸ್ಥೆ ಸಂಯುಕ್ತ ಸಹಕಾರಿಯು ಮಾತ್ರ ಎಂದು ತಿಳಿಸಿದ ಶ್ರೀಯುತರು ತರಬೇತಿ ಕಾರ್ಯಕ್ರಮಗಳ ಗುಣಮಟ್ಟ ಹೆಚ್ಚಿಸುವಲ್ಲಿ ಸಹಕಾರಿಗಳ ಸಲಹೆ ಮಾರ್ಗ ದರ್ಶನಗಳಿಗೆ ಸ್ವಾಗತಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಗುಲ್ಬರ್ಗಾ ಜಿಲ್ಲೆಯ ಪ್ರತಿನಿಧಿ ಶ್ರೀ ಶಾಂತಿನಾಥ ಪಂಡಿತ, ಯಾದಗೀರ ಜಿಲ್ಲೆಯ ಪ್ರತಿನಿಧಿ ಶ್ರೀ ವೈ.ಟಿ.ಪಾಟೀಲ, ಗುಲ್ಬರ್ಗಾದ ಶ್ರೀ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಸಂಜೀವ ಮಹಾಜನರವರುಗಳು ಗುಲ್ಬರ್ಗಾ ವಿಭಾಗದಲ್ಲಿ ಕಾರ್ಯಕ್ರಮವನ್ನು ಹಮ್ಮಿ ಕೊಂಡಿರುವುದಕ್ಕೆ ಸಂಯುಕ್ತ ಸಹಕಾರಿಯನ್ನು ಅಭಿನಂದಿಸಿ ಪ್ರತಿ ವರ್ಷ ಈ ವಿಭಾಗದಲ್ಲಿ ಇಂತಹ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಲಹೆ ನೀಡಿ ತರಬೇತಿ ಕಾರ್ಯಕ್ರಮಗಳ ಯಶಸ್ವಿಗೆ ಸಂಪೂರ್ಣ ಸಹಕಾರದ ಭರವಸೆ ನೀಡಿದರು.

ಯೋಗ ಶಿಕ್ಷಕ ಶ್ರೀ ಕೆ.ಎಸ್.ಕುಲಕರ್ಣಿಯವರು ಪ್ರತಿದಿನ ಯೋಗಾ ಭ್ಯಾಸದಲ್ಲಿ ಭಾಗವಹಿಸಿದ ಎಲ್ಲ ಶಿಬಿರಾರ್ಥಿಗಳಿಗೆ ಇಲ್ಲಿ ತಿಳಿದು ಕೊಂಡಿರುವುದನ್ನು ದಿನನಿತ್ಯ ಅಭ್ಯಾಸಕ್ರಮವಿಡಲು ತಿಳಿಸಿದರಲ್ಲದೆ ಪರಿಸರದಲ್ಲಿ ಯೋಗಭ್ಯಾಸದ ಬಗ್ಗೆ ಅರಿವುಮೂಡಿಸುವ ಕ್ರಮ ಅಗತ್ಯ



ಎಂದು ತಿಳಿಸಿದರು.ಅವಕಾಶಕ್ಕಾಗಿ ವಂದಿಸಿದರು.

ಶಿಬಿರಾರ್ಥಿಗಳಿಂದಲೆ ಆಯೋಜಿತವಾದ ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರನ್ನು ಅಭಿನಂದಿಸಿ ಸಂಯುಕ್ತ ಸಹಕಾರಿಗೆ ನೆನಪಿನ ಕಾಣಿಕೆಯನ್ನು ನೀಡಿದರು.

**ಪ್ರಶಸ್ತಿಗಳು** : ಸಂಯುಕ್ತ ಸಹಕಾರಿಯ ವತಿಯಿಂದ ಶ್ರೀಮತಿ ಸುಮಂಗಲಾ ಸೊನ್ನದ ಇವರಿಗೆ ಉತ್ತಮ ಶಿಬಿರಾರ್ಥಿ ಪ್ರಶಸ್ತಿ, ಉತ್ತಮ ಸುವಿಚಾರ ಮಂಡನೆಗೆ ಶ್ರೀ ಮಾಣಿಕರೆಡ್ಡಿಯವರಿಗೆ, ಉತ್ತಮ ಇನ್ಸಟಂಟ ಮಿಲಿ ಮಂಡನೆಗೆ ಶ್ರೀ ಲೋಕೇಶಕುಮಾರ ನಾಯ್ಕ, ಉತ್ತಮ ಪ್ರಾರ್ಥನೆಗೆ ಶ್ರೀಮತಿ ಕುಸುಮ ಹಾಗೂ ಶ್ರೀಮತಿ ಸುಭಾಷಿಣಿಯವರುಗಳಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಉಳಿದಂತೆ ತುಂಗಾ ತಂಡಕ್ಕೆ ಉತ್ತಮ ವ್ಯವಸ್ಥಾಪನಾ ಕಾರ್ಯನಿರ್ವಹಣೆಗೆ ತಂಡ, ರೋಸ ತಂಡಕ್ಕೆ ಉತ್ತಮ ಸಮಯ ಪಾಲನೆ ತಂಡ, ನೇತ್ರಾವರಿ ಉತ್ತಮ ಊಟೋಪಚಾರ ವ್ಯವಸ್ಥೆಯ ತಂಡ ಹಾಗೂ ಕಾವೇರಿ ತಂಡಕ್ಕೆ ಉತ್ತಮ ಮನರಂಜನೆಯ ತಂಡ ಪ್ರಶಸ್ತಿಗಳನ್ನು ನೀಡಲಾಯಿತು.

**ವಿವಿಧ ಸ್ಪರ್ಧೆಗಳು :** ಶ್ರೀ ವೀರೇಶ್‌ರವರು ಮ್ಯೂಸಿಕಲ್ ಚೇರನಲ್ಲಿ – ಸ್ಪೂನಲ್ಲಿ ಲಿಂಬೆಹಣ್ಣು ಇಟ್ಟುಕೊಂಡು ನಡೆಯುವದರಲ್ಲಿ ಶ್ರೀ ಪ್ರಕಾಶ ಹಾಗೂ ಒಂದು ನಿಮಿಷದಲ್ಲಿ ಹೆಚ್ಚು ಬಾರಿ ಸೂಜಿ ಪೋಣಿಸುವುದರಲ್ಲಿ ಶ್ರೀಮತಿ ಶಿವಲೀಲಾ ಕಳ್ಳಿಗುಡ್ಡ ರವರು ಪ್ರಥಮಸ್ಥಾನ ಪಡೆದರು.

ಪ್ರಾರಂಭದಲ್ಲಿ ಶಿಬಿರಾರ್ಥಿಗಳಾದ ಶ್ರೀಮತಿ ಕುಸುಮಾ ಹಾಗೂ ತಂಡದವರಿಂದ ಪ್ರಾರ್ಥನೆ ಶಿಬಿರಾರ್ಥಿ ಶ್ರೀ ರವಿಕಾಂತ ಶೆಟ್ಟಿಯವರಿಂದ ಸ್ವಾಗತಕಾರ್ಯಕ್ರಮ. ನಂತರದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯವರಿಂದ ಕಾರ್ಯಕ್ರಮದ ವರದಿ ಮಂಡನೆ. ಕೊನೆಯಲ್ಲಿ ಶಿಬಿರಾರ್ಥಿ ಶ್ರೀ ಎಮ್. ರಘುನಂದನರವರು ವಂದನಾರ್ಪಣೆ ಮಾಡಿದರು. ಶಿಬಿರಾರ್ಥಿ ಶ್ರೀ ವೀರೇಶರವರು ನಿರೂಪಣೆ ಮಾಡಿದರು.

# ಸಹಕಾರದ ಕೊರತೆ ನೀಗಿಸುವ ಕಾರ್ಯ ಸಹಕಾರ ಕ್ಷೇತ್ರ ಯಶಸ್ವಿಯಾಗಿ ನಿರ್ವಹಿಸಬೇಕು – ಸೌಹಾರ್ದ ಸಹಕಾರ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ



1ನೇ ಜನೆವರಿ 2001ರಂದು ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ದ್ಯೋತಕವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕಚೇರಿ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ವಿಕ್ರಮ ಸಾಪ್ತಾಹಿಕ ಪತ್ರಿಕೆಯ ಸಂಪಾದಕ, ಹಿರಿಯ ಪತ್ರಕರ್ತ ಶ್ರೀ ದು. ಗು.ಲಕ್ಷ್ಮಣರವರು ದೇಶದಲ್ಲಿ ಶ್ರೀಮಂತರು ಹೆಚ್ಚಾಗಿದ್ದಾರೆ ಆದರೆ ದೇಶ ಬಡವಾಗ್ತಾಯಿದೆ. ಜನಸಾಮಾನ್ಯರು ಹಾಗೂ ಶ್ರೀಮಂತರ ನಡುವಿನ ಅಂತರ ಕಡಿಮೆಯಾಗಬೇಕಿದೆ. ವಿಶೇಷವಾಗಿ 1/1/2001 ರಿಂದ ಪ್ರಾರಂಭವಾಗಿರುವ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಈ ಬಗ್ಗೆ ಹೆಚ್ಚಿನ ಗಮನಹರಿಸುತ್ತಿರುವುದು ಕಂಡು ಬರುತ್ತಿದೆ. 13 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 2700 ವಿವಿಧ ರೀತಿಯ ಸೌಹಾರ್ದ ಸಹಕಾರಿಗಳು ಪ್ರಾರಂಭವಾಗಿ ಉತ್ತಮವಾಗಿ ಶ್ಲಾಘನೀಯ ಎಂದು ತಿಳಿಸಿ ಸೌಹಾರ್ದ ಸಹಕಾರಿ ದಿನದ ಆಚರಣೆಗೆ ಶುಭಹಾರೈಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹೊಸದಿಗಂತ ಪತ್ರಿಕೆಯ ಸಂಪಾದಕ ಶ್ರೀ ಎಸ್.ಶಾಂತಾರಾಂರವರು ಮಾತನಾಡಿ ಸಹಕಾರ ಕ್ಷೇತ್ರದಿಂದ ಜನಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದು ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಅವಲೋಕಿಸಿದಾಗ ಕಂಡುಬರುತ್ತದೆ. ಈ ಕ್ಷೇತ್ರದ ಅಭಿವೃದ್ಧಿಗೆ ಎಲ್ಲರೂ ಒಕ್ಕಟ್ಟಾಗಿ ಶ್ರಮಿಸಬೇಕು. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಂಯುಕ್ತ ಸಹಕಾರಿಯ ಕಾರ್ಯ ನಿರ್ವಹಿಸುತ್ತಿರುವುದು ಸಂತೋಷದ ವಿಷಯ ಎಂದು ತಿಳಿಸಿ ಶುಭ ಕೋರಿದರು.

ಪ್ರಾರಂಭದಲ್ಲಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಮಾತನಾಡಿ ಸೌಹಾರ್ದ ಸಹಕಾರಿ ದಿನದ ಔಚಿತ್ಯವನ್ನು ವಿವರಿಸುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಬಂದು 13 ವರ್ಷಗಳಾಗಿವೆ. ಈ ಅವಧಿಯಲ್ಲಿ ರಾಜ್ಯದಲ್ಲಿ 2700 ಸಹಕಾರಿಗಳು ನೊಂದಣಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಸೌಹಾರ್ದ ಸಹಕಾರಿ ವ್ಯಾಪಕವಾಗಿ ಬೆಳೆಬೇಕಿದೆ. ಸ್ವಾಯತ್ತತೆ ಸ್ವೇಚ್ಛಾಚಾರವಾಗಬಾರದು. ಈ ಕ್ಷೇತ್ರದ ನೇತಾರರಾಗಿ ಆರೋಗ್ಯಕರ ಬೆಳವಣಿಗೆಗೆ ಪೂರಕವಾಗಿ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದೆ. ಈ ಬಗ್ಗೆ ರಾಜ್ಯವ್ಯಾಪಿ ಸೌಹಾರ್ದ ಸಹಕಾರಿ ದಿನದ ಆಚರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

**ತಿದ್ದುಪಡಿ :** ಡಿಸೆಂಬರ್ 2013ರ ಸಂಚಿಕೆಯಲ್ಲಿ ದಿನಾಂಕ : 18–11–2013ರರಂದು ಕೋಲಾರದಲ್ಲಿ ನಡೆದ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಗುಲ್ಬರ್ಗಾ ಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿಯನ್ನು ಉತ್ತಮ ಸಹಕಾರಿ ಸಂಸ್ಥೆಯೆಂದು ಪುರಸ್ಕರಿಸಲಾಗಿರುವುದನ್ನು ಪ್ರಕಟಣೆಯಲ್ಲಿ ಕೈತಪ್ಪಿದೆ ಇದಕ್ಕಾಗಿ ವಿಷಾಧಿಸುತ್ತೇವೆ.



**ಅಭಿನಂದನೆ :** ಮೈಸೂರಿನ ಗಾಯತ್ರಿ ಸೌಹಾರ್ದ ಸಹಕಾರಿ ಅವರು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಅವರಿಗೆ ಅಭಿನಂದಿಸಿದರು. ಚಿತ್ರದಲ್ಲಿ ಸಂಯುಕ್ತ ಸಹಕಾರಿ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ಗಾಯತ್ರಿ ಸೌಹಾರ್ದ ಸಹಕಾರಿಯ ಪದಾಧಿಕಾರಿಗಳು ಇದ್ದಾರೆ.

# ಸೌಹಾರ್ದ ಸಹಕಾರಿ ದಿನಾಚರಣೆ



**ಬೆಳಗಾವಿ** ವಿಭಾಗದಲ್ಲಿ 01–01–2014ರಂದು ಅದ್ದೂರಿಯಾಗಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಮಾಡಲಾಯಿತು. ನಿವೃತ್ತ ಅಧಿಕ್ಷಕ ಇಂಜಿನಿಯರ್ ಶ್ರೀ ವಾಮರಾವ್ ಹುಯಿಲಗೋಳ ಧ್ವಜರೋಹಣ ನೇರವೇರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಯೋಗೇಂದ್ರ ರೆಡ್ಡಿ, ಶ್ರೀ ಎಸ್.ಜಿ. ದೇಸಾಯಿ, ಶ್ರೀ ಶಾಂತಿನಾಥ ನಾಯ್ಕ, ಹುಯಿಲಗೋಳ, ಅರಿಹಂತ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳು, ವಿಭಾಗೀಯ ಕಛೇರಿತ ರಿಜಿನಲ್ ಮ್ಯಾನೇಜರ್ ಹಾಗೂ ಎಲ್ಲ ಸಿಬ್ಬಂದಿಗಳು ಮತ್ತು ಕೆಲವು ಸೌಹಾರ್ದ ಸಹಕಾರಿಗಳು ಉಪಸ್ಥಿತರಿದ್ದರು. ವಿಭಾಗೀಯ ಕಛೇರಿಯ ರಿಜಿನಲ್ ಮ್ಯಾನೇಜರ್ ಶ್ರೀ ಜಿ.ಎಸ್.ಟೊಪಣ್ಣವರು ಎಲ್ಲರನ್ನೂ ಸ್ವಾಗತಿಸಿದರು.



**ಗುಲಬರ್ಗಾ** ಜಿಲ್ಲೆಯ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ವಿಶ್ವನಾಥ ಮಲಕೂಡರವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ಗುಲಬರ್ಗಾ ವಿಭಾಗೀಯ ಕಛೇರಿಯಲ್ಲಿ ಹಮ್ಮಿಕೊಂಡಿದ್ದ "ಸೌಹಾರ್ದ ಸಹಕಾರಿ ದಿನ" ಆಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಸ್.ಸಂಜೀವ ಮಹಾಜನ್, ಶ್ರೀಮತಿ ಶೈಲಜ ವಿ. ತಪಲಿ, ಶ್ರೀ ಎಂ.ಕೆ. ಪಾಟೀಲ್ ಹಾಗೂ ಗುಲಬರ್ಗಾ ನಗರದ 15 ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ಅತಿಥಿಗಳನ್ನು ಶ್ರೀ ಸಂಜಯ ಕೋರಟಕರ, ವಿಭಾಗೀಯ ಅಧಿಕಾರಿ, ಗುಲಬರ್ಗಾ ವಿಭಾಗ ಇವರು ಸ್ವಾಗತಿಸಿ, ವಂದಿಸಿದರು.



**ಹಾನಗಲ್** ಆದಿಶಕ್ತಿ ಸೌಹಾರ್ದ ಸಹಕಾರಿಯಲ್ಲಿ ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು. ಶ್ರೀ ಸಿ.ಎಂ. ಉದಾಸಿ ಧ್ವಜಾರೋಹಣ ನೆರವೇರಿಸಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಎಂ.ಬಿ. ಕಲಾಲ್ ಹಾಗೂ ಇತರ ಗಣ್ಯರು ಉಪಸ್ಥಿತರಿದ್ದರು.



**ದೇವದುರ್ಗ** ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,ಯಲ್ಲಿ ಜನವರಿ 1ರಂದು ಸೌಹಾರ್ದ ಸಹಕಾರಿ ದಿನಾಚರಣೆ ಆಚರಿಸಲಾಯಿತು. ಅಧ್ಯಕ್ಷರಾದ ಗಿರಿಜಮ್ಮ, ಉಪಾಧ್ಯಕ್ಷ ವೆಂಕಟ್ರಾಯಗೌಡ ಬೆನಕನ್, ಸಿದ್ದಲಿಂಗಯ್ಯ ಸ್ವಾಮಿ ಅಕ್ಕಮಹಾದೇವಿ ಇರತರರು ಈ ಸಂದರ್ಭದಲ್ಲಿದ್ದರು.




**ಕೊಡಗು** ವಿದ್ಯಾ ಇಲಾಖಾ ನೌಕರರ ಪತ್ತಿನ ಸಹಕಾರಿ ನಿ.,ಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



**ತೀರ್ಥಹಳ್ಳಿಯ** ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ಯಲ್ಲಿ ಸೌಹಾರ್ದ ದಿನಾಚರಣೆ ಆಚರಿಸಲಾಯಿತು. ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಂ.ಲಕ್ಷ್ಮಿನಾರಾಯಣ್‌ರವರು ಧ್ವಜಾರೋಹಣ ನೆರವೇರಿಸಿ ಸರ್ವರಿಗೆ ಶುಭ ಹಾರೈಸಿದರು.

# ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ಕಛೇರಿ ಉದ್ಘಾಟನೆ

**ಹುಣಸಮಾರನಹಳ್ಳಿ :** ಸಹಕಾರಿಯು ತನ್ನ ಸದಸ್ಯರಿಗೆ ವಾಣಿಜ್ಯ ಬ್ಯಾಂಕುಗಳಂತೆ ಸೇವೆ ಸಲ್ಲಿಸಿದರೆ ಗ್ರಾಹಕರು ನಮ್ಮ ಸಹಕಾರಿಗಳತ್ತ ಗಮನಹರಿಸಿ ಹೆಚ್ಚುಹೆಚ್ಚಾಗಿ ವ್ಯವಹಾರದಲ್ಲಿ ತೊಡಗಿಸಿಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ಸಹಕಾರಿಗಳ ಪಾತ್ರ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್‌ರವರು ತಿಳಿಸಿದರು.

ಹುಣಸಮಾರನಹಳ್ಳಿಯಲ್ಲಿ ಶ್ರೀ ಅಕ್ಷಯ ಕ್ರೆಡಿಟ್ ಸಹಕಾರಿಯ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿ, ಗ್ರಾಹಕರ ಸೇವೆಗೆ ಹಲವು ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಳ್ಳಬೇಕಾಗಿದೆ. ಇದರಿಂದ ಸಹಕಾರಿಯ ಗ್ರಾಹಕರು ರಾಷ್ಟ್ರೀಕೃತ ಬ್ಯಾಂಕುಗಳ ಸೇವೆಯಿಂದ ವಿಮುಖರಾಗಿ ಸಹಕಾರಿಗಳ ಕಡೆ ಹೆಚ್ಚು ಅವಲಂಭಿತರಾಗುತ್ತಾರೆ ಎಂದರು.

ಸಹಕಾರಿಗಳ ಪ್ರತಿಯೊಬ್ಬ ಸದಸ್ಯ ಕನಿಷ್ಠ ವ್ಯವಹಾರದಲ್ಲಿ ಭಾಗಿಯಾಗಿ ಕೇಂದ್ರ ಸರ್ಕಾರ ತಂದಿರುವ 97ರ ತಿದ್ದುಪಡಿ ಅನ್ವಯ ತಮ್ಮಗಳ ಸದಸ್ಯತ್ವವನ್ನು ಉಳಿಸಿಕೊಂಡು ಸಹಕಾರಿಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕೆಂದು ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.



ಖ್ಯಾತ ಲೆಕ್ಕ ಪರಿಶೋಧಕರಾದ ಶ್ರೀ ಮಧುಕರ್ ಜಿ.ಹೆಗ್ಡೆ, ಅಪೆಕ್ಸ್ ಬ್ಯಾಂಕ್ ಯಲಹಂಕ ಶಾಖೆಯ ಮುಖ್ಯ ಪ್ರಬಂಧಕರಾದ ಶ್ರೀ ಡಿ.ರಾಮಣ್ಣ, ಹುಣಸಮಾರನಹಳ್ಳಿ ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಶ್ರೀ ಎ.ಕೆ.ಜಿಲಾನಿ, ಶ್ರೀ ಅಕ್ಷಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬೈರೇಗೌಡ, ಉಪಾಧ್ಯಕ್ಷರಾದ ಶ್ರೀ ವೀರೇಶ್, ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ.ಪುಟ್ಟಶಾಮಪ್ಪ ಮತ್ತು ಸಹಕಾರಿಯ ಎಲ್ಲ ನಿರ್ದೇಶಕರು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಡಿ.ಎಸ್. ವೆಂಕಟಾಚಪತಿ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು.

# ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕ ಶ್ರೇಷ್ಠ ಸಹಕಾರಿ ಶ್ರೀ ಲಕ್ಷ್ಮೀಕಾಂತರೆಡ್ಡಿಯವರಿಗೆ 75 ವಸಂತಗಳ ಸಂಭ್ರಮ ಅಭಿಮಾನಿಗಳಿಂದ ಅದ್ದೂರಿಯ ಅಭಿನಂದನಾ ಸಮಾರಂಭ



ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕ ಹಾಗೂ ಚಿತ್ರದುರ್ಗದ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಪ್ರಗತಿಪರ ರೈತ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತ ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿಯವರು 70 ವಸಂತಗಳು ಪೂರೈಸಿದ ಸಂದರ್ಭದಲ್ಲಿ ಅವರ ಅಭಿಮಾನಿಗಳು ದಿನಾಂಕ : 29/12/2013ರಂದು ಚಿತ್ರದುರ್ಗದ ಎಸ್.ಜೆ.ಎಮ್.ಸಭಾಂಗಣದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದ್ದರು. ಸಮಾರಂಭ ಅತ್ಯಂತ ವಿಜ್ರಂಭನೆಯಿಂದ ಜರುಗಿತು. ಸಮಾರಂಭದಲ್ಲಿ ಸಹಕಾರ ಸಚಿವ ಶ್ರೀ ಹೆಚ್. ಎಸ್.ಮಹದೇವಪ್ರಸಾದ್, ಲೋಕೋಪಯೋಗಿ ಸಚಿವ ಶ್ರೀ ಹೆಚ್.ಸಿ.ಮಹದೇವಪ್ಪ ಹಾಗೂ ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಆಂಜನೇಯಲು ರವರುಗಳು ಭಾಗವಹಿಸಿ ಶ್ರೀಯುತರಿಗೆ ಶುಭಕೋರಿದರು. ಡಾ.ಶಿವಮೂರ್ತಿ ಮುರುಘಾ ಶರಣರು ಶ್ರೀ ಬೃಹನ್ಮಠ ಚಿತ್ರದುರ್ಗರವರು ದಿವ್ಯ ಸಾನಿಧ್ಯವಹಿಸಿ ಶ್ರೀಯುತರಿಗೆ ಶುಭಕೋರಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ನಿರ್ದೇಶಕರುಗಳಾದ ಶ್ರೀ ರಾವಸಾಹೇಬ್ ಪಾಟೀಲ್, ಶ್ರೀ ಎಮ್.ಬಿ.ಕಲಾಲ, ಶ್ರೀ ಆರ್.ಎನ್.ದೇಶಪಾಂಡೆ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಗಂಗಾಧರಯ್ಯ, ಶ್ರೀ ಸಣ್ಣಸೂಗಪ್ಪ, ಶ್ರೀ ನಾಗೇಂದ್ರ ಗುಪ್ತಾ, ಶ್ರೀ ಆನಂದ ಎಲ್.ಎಸ್ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್, ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ ಮುಂತಾದವರು ಭಾಗವಹಿಸಿ ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀಯುತರನ್ನು ಗೌರವಿಸಿ ಅಭಿನಂದಿಸಿದರು. ಜಿಲ್ಲೆಯ ಸಹಕಾರಿ ಗಣ್ಯರು ಹಾಗು ಸಾವಿರಾರು ಸಂಖ್ಯೆಯಲ್ಲಿ ಅಭಿಮಾನಿಗಳು ಉಪಸ್ಥಿತರಿದ್ದು ಶ್ರೀಯುತರನ್ನು ಅಭಿನಂದಿಸಿದರು.

## ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ



ಸ್ವಾಭಿಮಾನಿ ಸಹಕಾರಿಯ ನೂತನ ವರ್ಷದ ಕ್ಯಾಲೆಂಡರನ್ನು ಸಹಕಾರ ಸಚಿವರಾದ ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಉಪಾಧ್ಯಕ್ಷ ಶ್ರೀ ಹೆಚ್.ವಿ. ರಾಜೀವ ಹಾಗೂ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಇದ್ದರು.

## 2014 ಜನವರಿ ತಿಂಗಳಿನ ಅಧ್ಯಕ್ಷರ ಪ್ರವಾಸದ ವಿವರ



| | |
|---|---|
| 1 ರಿಂದ 5 | ಬೆಳಗಾವಿ |
| 1, 2 | ಬೀದರ |
| 3 | ಗುಲ್ಬರ್ಗಾ |
| 4 ಬೀದರ | |
| 6,7 ಬೆಂಗಳೂರು – ಸೌಹಾರ್ದ ಸಹಕಾರಿಗಳ ಭೇಟಿ. | |
| 9,10,11,12 | ಬೀದರ |
| 13 ಬಸವೇಶ್ವರ ಸೌಹಾರ್ದ ಸಹಕಾರಿಯ ಶಾಖೆ ಉದ್ಘಾಟನೆ ಶಹಾಪುರ ಯಾದಗೀರ ಜಿಲ್ಲೆ, ಸೌಹಾರ್ದ ಸಹಕಾರಿಗಳ ಭೇಟಿ. | |
| 16,17 ಬೆಂಗಳೂರು ಕಚೇರಿ ಕಾರ್ಯನಿರ್ವಹಣೆ ಹಾಗೂ ಆಡಳಿತ ಮಂಡಳಿ ಸಭೆ ಕಾರ್ಯನಿರ್ವಹಣೆ. | |
| 20,21,22 ದೆಹಲಿ ಸಂಯುಕ್ತ ಸಹಕಾರಿಯ ಕಚೇರಿ ಕೆಲಸ ಹಾಗೂ ಡಿ.ಟಿ.ಸಿ ಬಗ್ಗೆ ಕೇಂದ್ರದ ಅಧಿಕಾರಿಗಳನ್ನು ಭೆಟಿಮಾಡುವುದು. | |
| 23, 24, 25 ಬುಲ್ಡಾನಾ ಕ್ರೆಡಿಟ್ ಸಹಕಾರ ಸಂಘ ಹಾಗೂ ಜಲಗಾವ್ ಪ್ರವಾಸ. | |
| 27 ರಿಂದ 31. ಸಂಯುಕ್ತ ಸಹಕಾರಿಯ ಜನವರಿ ಮಾಹೆಯ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. | |

## ಭಾವಪೂರ್ಣ ಶ್ರದ್ಧಾಂಜಲಿ

- ಶ್ರೀ ಶ್ರೀಕಂಠದತ್ತ ಜಯಚಾಮರಾಜ ಒಡೆಯರ. ಮೈಸೂರು ರಾಜಮನೆತನದ ಕೊನೆಯ ಕುಡಿ.
- ರಾಷ್ಟ್ರಕವಿ ಶ್ರೀ ಜಿ.ಎಸ್.ಶಿವರುದ್ರಪ್ಪ, ಖ್ಯಾತ ಸಾಹಿತಿ 61ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು.
- ರಾಜ್ಯದ ಹಿರಿಯ ಸಹಕಾರಿಗಳಾದ ಹಾಗೂ ಕ್ಯಾಮ್‌ಕೋ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ವಾರಣಾಸಿ ಸುಬ್ರಾಯಭಟ್ಟ.
- ಸಹಕಾರಿ ಮುಖಂಡರುಗಳಾದ ಶ್ರೀ ಆರ್. ಎನ್.ನಾಯ್ಕ ಅಧ್ಯಕ್ಷರು, ದ್ವಾರಕಾ ಪತ್ತಿನ ಸೌಹಾರ್ದ ಸಹಕಾರಿ ಅಂಕೋಲಾ.
- ಶ್ರೀ ಸುಭಾಶರೆಡ್ಡಿ ಪಾಟೀಲ್ ನಿರ್ದೇಶಕರು, ಅಧ್ಯಕ್ಷರು, ರಾಯಚೂರು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.
- ಶ್ರೀ ಕೃಷ್ಣಪ್ಪ ವ್ಯಾಪಾರಿ, ಸಿಟಿ ಮಾರ್ಕೆಟ್, ಬೆಂಗಳೂರು ಸಂಯುಕ್ತ ಸಹಕಾರಿಯ ಬೆಂಗಳೂರು ಜಿಲ್ಲಾ ನಿರ್ದೇಶಕಿ ಶ್ರೀಮತಿ ಹೆಚ್.ಸಿ.ನಾಗರತ್ನರವರ ಪತಿ.

ಮೇಲಿನ ಎಲ್ಲ ಮಹನೀಯರುಗಳ ನಿಧನದಿಂದ ದೇಶಕ್ಕೆ ರಾಜ್ಯಕ್ಕೆ ಹಾಗೂ ವಿಶೇಷವಾಗಿ ಸಹಕಾರ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಭಗವಂತನು ಮೃತರ ಕುಟುಂಬವರ್ಗದವರಿಗೆ ಅವರ ಅಗಲಿಕೆಯನ್ನು ಸಹಸಿಕೊಳ್ಳುವ ಶಕ್ತಿಯನ್ನು ದಯಪಾಲಿಸಲಿ. ಮೃತರಿಗೆ ಶಾಂತಿಯನ್ನು ನೀಡಲಿ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ.



ಶ್ರೀಕಂಠದತ್ತ ಒಡೆಯರ್



ಜಿ.ಎಸ್. ಶಿವರುದ್ರಪ್ಪ



ಸುಬ್ರಾಯಭಟ್ಟ



ಆರ್.ಎನ್.ನಾಯಕ



ಸುಭಾಷ್‌ರೆಡ್ಡಿ ಪಾಟೀಲ್

## ಜನವರಿ 2014 ಮಾಹೆಯ ತರಬೇತಿ ಕಾರ್ಯಕ್ರಮಗಳು :

- ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಧಿಕಾರಿಗಳಿಗೆ 2 ದಿನಗಳ ತರಬೇತಿ – ಜನವರಿ 29, 30, ಸ್ಥಳ : ತರಂಗ ರೆಸಾರ್ಟ್, ದೇವಭಾಗ್, ಕಾರವಾರ.
- ಸಂಯುಕ್ತ ಸಹಕಾರಿ ನಿರ್ದೇಶಕರುಗಳಿಗೆ ತರಬೇತಿ 2 ದಿನಗಳ ತರಬೇತಿ – ಜನವರಿ 31, ಫೆಬ್ರವರಿ 1, ಸ್ಥಳ : ತರಂಗ ರೆಸಾರ್ಟ್, ದೇವಭಾಗ್, ಕಾರವಾರ.

# ಸೌಹಾರ್ದ ಸಹಕಾರಿಗಳ ಅಂತರರಾಜ್ಯ ಗೋವಾ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಅಧ್ಯಯನ ಪ್ರವಾಸ ಕಾರ್ಯಕ್ರಮ - ಫೆಬ್ರವರಿ 2014 : ಹೆಸರು ನೊಂದಾಯಿಸಲು ಸೂಚನೆ

ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳ ಕೋರಿಕೆಯ ಮೇರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಅಧಿಕಾರಿಗಳಿಗಾಗಿ ಅಂತರ ರಾಜ್ಯ ಪ್ರವಾಸ ಕಾರ್ಯಕ್ರಮಗಳನ್ನು ವ್ಯವಸ್ಥೆಮಾಡಲು ತೀರ್ಮಾನಿಸಿದೆ. ಪ್ರಾಯೋಗಿಕವಾಗಿ ಒಂದನೆ ತಂಡದ ಕಾರ್ಯಕ್ರಮವನ್ನು ಫೆಬ್ರವರಿ 2014 ಕೊನೆಯ ವಾರದಲ್ಲಿ ಗೋವಾ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳ ಉತ್ತಮ ಸಹಕಾರಿ ಸಂಸ್ಥೆಗಳಿಗೆ ಹಾಗೂ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ವ್ಯವಸ್ಥೆ ಮಾಡಲಾಗುವುದು.

**ವಿವರಗಳು ಈ ರೀತಿ ಇವೆ :**

ಪ್ರವಾಸದ ಅವಧಿ 10 ದಿನಗಳು ಭಾಗವಹಿಸುವ ಸಹಕಾರಿಗಳ ಸಂಖ್ಯೆ : 30 (ಮೊದಲು ಬಂದವರಿಗೆ ಮೊದಲು ಆದ್ಯತೆ ನಂತರ ಬಂದವರಿಗೆ 2ನೇ ತಂಡದಲ್ಲಿ ಸೇರಿಸಲಾಗುವುದು.) ಪ್ರವಾಸ 2 x 2ಸೀಟಿಂಗ್ ವ್ಯವಸ್ಥೆಯಿರುವ ಪುಶ್ ಬ್ಯಾಕ್ ಇರುವ ಲಕ್ಸುರಿ ಬಸ್, 2 ಊಟ, 1 ಉಪಾಹಾರ, 2 ಕಾಫೀ/ಟಿ. ಸಾಮಾನ್ಯ ವಸತಿ ವ್ಯವಸ್ಥೆ. ಸಾಮೂಹಿಕ ಭೋಜನ ವ್ಯವಸ್ಥೆ ಮಾಡಲಾಗುವುದು. ಪ್ರವಾಸ ಶುಲ್ಕ ತಲಾ ಒಬ್ಬರಿಗೆ ರೂ 14,000/- (ಪ್ರವಾಸ ಮುಗಿದ ನಂತರ ಒಟ್ಟಾರೆ ವೆಚ್ಚವನ್ನು ಕೂಡಿದಾಗ ಈಗ ನಿಗದಿಮಾಡಿರುವುದಕ್ಕಿಂತ ಹೆಚ್ಚುವರಿ ವೆಚ್ಚವಾದಲ್ಲಿ ಪ್ರವಾಸದಲ್ಲಿ ಭಾಗವಹಿಸಿದ ಸೌಹಾರ್ದ ಸಹಕಾರಿಗಳು ಭರಿಸಬೇಕಾಗುತ್ತದೆ.)

ದಿನಾಂಕ ನಿಗದಿಯಾದ ನಂತರ ಪ್ರವಾಸದಲ್ಲಿ ಭಾಗವಹಿಸುವ ಸಹಕಾರಿಗಳಿಗೆ ಸೂಚನೆ ನೀಡಲಾಗುವುದು. ಪ್ರವಾಸದಲ್ಲಿ ಭಾಗವಹಿಸಲು ಅಪೇಕ್ಷಿಸುವವರಿಗೆ ನೊಂದಣೆ ಪತ್ರವನ್ನು ಕಳುಹಿಸಲಾಗುವುದು ಈ ಪತ್ರದಲ್ಲಿ ಪ್ರತಿನಿಧಿಗಳು ತಮ್ಮ ಎಲ್ಲ ವಿವರ ಹಾಗೂ ಭಾವಚಿತ್ರವನ್ನು ಲಗತ್ತಿಸಿ ಕಳುಹಿಸುವುದು. ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ. **ನೊಂದಣೆಯನ್ನು ಮಾಡಲು ಕೊನೆಯ ದಿನಾಂಕ : 31-1-2014**

## ವಾಹನ ಮಾರಾಟಕ್ಕಿದೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉತ್ತಮ ಕಂಡಿಶನ್ನಲ್ಲಿರುವ ಕಚೇರಿ ವಾಹನ ಟೊಯೋಟಾ ಇನೋವಾ ಕೆಎ – 01 ಎಮ್.ಎಫ್. 4424, 2010 ಮಾಡೆಲ್ ಬಿಳಿ ಬಣ್ಣ ಇರುವುದು ಮಾರಾಟಮಾಡಲು ತಿರ್ಮಾನಿಸಿದೆ. ಪ್ರಸ್ತುತ ವಾಹನದ ಬುಕ್ ವ್ಯಾಲ್ಯು ರೂ. 7,70,000 ಇರುತ್ತದೆ. ಇದಕ್ಕಿಂತಲೂ ಹೆಚ್ಚಿನ ಮೊತ್ತಕ್ಕೆ ಖರೀದಿಸಲು ಇಚ್ಛಿಸುವವರು ದಿನಾಂಕ : 31-1-2014 ಕಚೇರಿಯ ವೇಳೆಯಲ್ಲಿ ತಮ್ಮ ದರವನ್ನು ಲಿಖಿತವಾಗಿ ಸೂಚಿಸಬಹುದಾಗಿದೆ. ಈ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯ ಕಚೇರಿಗೆ ಅಥವಾ ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ಇವರನ್ನು ಸಂಪರ್ಕಿಸಲು ಕೋರಿದೆ.

**ಶರಣಗೌಡ.ಜಿ.ಪಾಟೀಲ್,**
**ವ್ಯವಸ್ಥಾಪಕ ನಿರ್ದೇಶಕರು.**



ಕೃಷಿ ಕ್ಯಾಲೆಂಡರ್ ಬಿಡುಗಡೆ : ಬೆಂಗಳೂರಿನ ವಿಕಾಸಸೌಧದಲ್ಲಿ ಕೃಷಿ ಸಚಿವರ ಕಚೇರಿಯಲ್ಲಿ ಡಿಸೆಂಬರ್ 31ರಂದು ಸುಕೋ ಬ್ಯಾಂಕ್‌ನ ಕೃಷಿ ಕ್ಯಾಲೆಂಡರ್‌ನ್ನು ಮಾನ್ಯ ಕೃಷಿ ಸಚಿವರಾದ ಶ್ರೀ ಕೃಷ್ಣಭೈರೇಗೌಡರು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸುಕೋ ಬ್ಯಾಂಕ್ ಅಧ್ಯಕ್ಷ ಮನೋಹರ ಮಸ್ಕಿ, ಮಲ್ಲೇಶ್ವರಮ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕ ಬಿ.ಆರ್. ರವೀಂದ್ರನಾಥ, ಶಿವಾನಂದ ಕಳವೆ ಉಪಸ್ಥಿತರಿದ್ದರು.

## "ಸುಕೃತ" ಸುಕೋ ಬ್ಯಾಂಕ್ ಕೃಷಿ ಪ್ರಶಸ್ತಿ ಸೌಹಾರ್ದ ಸಹಕಾರಿ ಕ್ಷೇತ್ರದ ಹೆಮ್ಮೆಯ ಕೊಡುಗೆ : ಕೃಷಿ ಸಚಿವ ಶ್ರೀ ಕೃಷ್ಣಭೈರೇಗೌಡ ಮೆಚ್ಚುಗೆ

ಸರ್ಕಾರೇತರ ಸಂಸ್ಥೆಯಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರತಿಷ್ಠಿತ ಪಟ್ಟಣ ಸುಕೋ ಸೌಹಾರ್ದ ಸಹಕಾರಿ ಬ್ಯಾಂಕು ರಾಜ್ಯದಲ್ಲಿಯೇ ಮೊದಲ ಬಾರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿ ನೀಡಲು ತಿರ್ಮಾನಿಸಿದೆ. ಆಹಾರ, ತೋಟಗಾರಿಕೆ, ವಾಣಿಜ್ಯ ಬೆಳೆಗಳಲ್ಲಿ ಸಾಧನೆಮಾಡಿ ಮಾದರಿ ಆಗಿರುವ ಒಬ್ಬ ರೈತನಿಗೆ ಈ ಪ್ರಶಸ್ತಿ ನೀಡಲಾಗುವುದು. ಈ ಪ್ರಶಸ್ತಿ ಒಂದು ಲಕ್ಷ ರೂ. ನಗದು ಬಹುಮಾನವನ್ನು ಹೊಂದಿರುತ್ತದೆ. ಇದರ ಜೊತೆಗೆ ಕೃಷಿ ಕ್ಷೇತ್ರದಲ್ಲಿ ಯುವ ಶಕ್ತಿಗೆ ಆಸಕ್ತಿ ಮೂಡಿಸುವ ಯುವ ಶಕ್ತಿಯನ್ನು ಕೃಷಿಯಲ್ಲಿ ಉಳಿಸಿಕೊಳ್ಳುವ "ಫೆಲೊಶಿಪ್" ನೀಡಲು ಸುಕೋ ಬ್ಯಾಂಕ್ ನಿರ್ಧರಿಸಿದೆ ಎಂದು ಬ್ಯಾಂಕ ಅಧ್ಯಕ್ಷ ಶ್ರೀ ಮನೋಹರ ಮಸ್ಕಿಯವರು ತಿಳಿಸಿದ್ದಾರೆ. ಸರ್ಕಾರೇತರ ಸಂಸ್ಥೆಯಾಗಿ ಕೃಷಿ ಕ್ಷೇತ್ರದಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ನೀಡುತ್ತಿರುವುದಕ್ಕೆ ಕೃಷಿ ಸಚಿವ ಶ್ರೀ ಕೃಷ್ಣಭೈರೇಗೌಡ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

# ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿ ಯವರಿಗಾಗಿ 10 ದಿನಗಳ ಅವಧಿಯ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಶಿಬಿರಾರ್ಥಿಗಳ ಅನಿಸಿಕೆ





ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಅವರಿಗೆ ಸನ್ಮಾನ



ಅಧ್ಯಯನ ಪ್ರವಾಸ



ಯೋಗಾಸನ ತರಬೇತಿ

ಜೀವನದಲ್ಲಿ ಕಲಿಯಬೇಕಾದ ಹಲವಾರು ವಿಷಯಗಳನ್ನು ತಿಳಿದುಕೊಳ್ಳಲು ಅವಕಾಶವಾಗಿದೆ. – **ಸಂತೋಷ ಬನಶೆಟ್ಟಿ ಸಿದ್ದಸಿರಿ ಸೌಹಾರ್ದ ಸಹಕಾರಿ ವಿಜಾಪುರ.**

ಪ್ರಕೃತಿಯ ಮಡಿಲಲ್ಲಿ ಜ್ಞಾನ ನೀಡುವ ವ್ಯವಸ್ಥೆಯಿಂದಾಗಿ ತರಬೇತಿ ಪರಿಣಾಮಕಾರಿ ಯಾಗಿತ್ತು. – **ವೀರೇಶ ಎನ್. ಲಿಂಗಸುಗೂರು ರೆಡ್ಡೇರ ಪತ್ತಿನ ಸೌಹಾರ್ದ ಸಹಕಾರಿ ಲಿಂಗಸುಗೂರು**

ಕಲಿಸಿದ್ದು ಬಹಳ. ಕಲಿತಿದ್ದು ಬಹಳ. ಶಿಬಿರದ ಸಮಯಪಾಲನೆ ಮೆಚ್ಚುವಂತಹದ್ದು – **ರವಿಕಾಂತ ಶೇಟ್ಟಿ ಹೈದರಬಾದ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರಿ ನಿ ಶಹಾಪುರ ಯಾದಗೀರ.**

ಇದೊಂದು ಅತ್ಯಂತ ಉತ್ತಮ ತರಬೇತಿ. ಯಾವುದೇ ಬದಲಾವಣೆಯಿಲ್ಲದೇ ಮುಂದುವರೆಸಿ. – **ಮೋಜೆಶ.ಎಸ್. ಆದರ್ಶ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಬೀದರ.**

ವ್ಯಯಕ್ತಿಕ ಜೀವನದಲ್ಲಿ ಮಹತ್ತರ ಬದಲಾವಣೆಗೆ ಅವಕಾಶ ಸಾಧ್ಯವಾಗುತ್ತದೆ. – **ಶಶಿಕಲಾ.ಶಿರೂರ ಬಾಪೂಜಿ ಸೌಹಾರ್ದ ಸಹಕಾರಿ ಬಾಗಲಕೋಟೆ.**

ಗ್ರಾಮಾಂತರಸಹಕಾರಿಯ ಗುರಿಸಾಧನೆಗೆ ಸಂಪೂರ್ಣ ಮಾಹಿತಿ ಒದಗಿಸಿದೆ. – **ಎ.ಎನ್. ಕೇಶವಮೂರ್ತಿ ಹೊಸಕೋಟೆ ಶ್ರೀ ಸತ್ಯಸಾಯಿ ಸೌಹಾರ್ದ ಸಹಕಾರಿ ಬೆಂಗಳೂರು**

ಶಿಬಿರಾರ್ಥಿಗಳ ಅನಿಸಿಕೆ

ಕಾರ್ಯಕ್ರಮ ಉತ್ತಮವಾಗಿತ್ತು. ಇದೇರೀತಿಯ ಕಡಿಮೆ ಅವಧಿಯ ತರಬೇತಿಗಳನ್ನು ಹಮ್ಮಿಕೊಳ್ಳುವುದು ಸಹ ಅಗತ್ಯವಿದೆ. – **ಸಂಗಮೇಶ್ವರ ಹತ್ತಿ ಮಹಾಗಾಂವ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಮಹಾಗಾಂವ ಗುಲ್ಬರ್ಗಾ.**

ಅತ್ಯಂತ ಪರಿಣಾಮಕಾರಿ ತರಬೇತಿ – **ಲೋಕೇಶಕುಮಾರ ನಾಯ್ಕ. ದಿ ಪಾವಗಡ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಕೋಲಾರ.**

ತರಬೇತಿ ಕಾರ್ಯಕ್ರಮ ನನಗೆ ಉತ್ತಮ ಅನುಭವ ನೀಡಿದೆ. – **ಪ್ರದೀಪ. ಕೆ. ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಪುತ್ತೂರು.**

ಉತ್ಕೃಷ್ಟ ತರಬೇತಿ. – **ಶಶಿಕಾಂತ ತ್ರಿವೇದಿ ಪುಣ್ಯಕೋಟಿ ಸೌಹಾರ್ದ ಕ್ರೆಡಿಟ್** ಸಹಕಾರಿ.

ಬೌದ್ಧಿಕ ಹಾಗೂ ದೈಹಿಕ ವಿಕಸಕ್ಕೆ ಸ್ಫೂರ್ತಿಯಾಗಿತ್ತು. – **ವಸಂತ ಉಡುಪಿ. ಅಂಬಲ್ಪಾಡಿ ಸೌಹಾರ್ದ ಸಹಕಾರಿ ಉಡುಪಿ.**

ಹೊಸ ಸೌಹಾರ್ದ ಸಹಕಾರಿಯನ್ನು ಹುಟ್ಟು ಹಾಕುವಷ್ಟು ಸಾಮರ್ಥ ಗಳಿಕೆ ಯಾಗಿದೆ. ಉತ್ತಮ ಮಾಹಿತಿ ದೊರೆತಿದೆ. – **ಸುಮಂಗಲ ಸೊನ್ನದ ಬಾಪುಜಿ ಸೌಹಾರ್ದ ಸಹಕಾರಿ ಬಾಗಲಕೋಟ.**

ಕಾರ್ಯಕ್ರಮ ಅಚ್ಚುಕಟ್ಟಾಗಿತ್ತು. ಲೆಕ್ಕಪತ್ರಗಳಿಗೆ ಸಂಬಂದಿಸಿದಂತೆ ಹೆಚ್ಚಿನ ಸಮಯ ಬೇಕಿತ್ತು. – **ಶಿವಕುಮಾರ. ಸುವಿಧಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಾಗರ.**

ಕೆಲಸದಲ್ಲಿ ಜ್ಞಾನ ಹಾಗೂ ಹೊಸ ಚೈತನ್ಯ ತುಂಬಿದೆ. – **ಹೆಚ್. ಎನ್.ಕುಸುಮ ಶ್ರೀ ಕನ್ನಿಕಾ ಪರಮೇಶ್ವರಿ ಸೌಹಾರ್ದ ಸಹಕಾರಿ ಚಿತ್ರದುರ್ಗ**

ಸಹಕಾರಿಗಳ ಸಿಬ್ಬಂದಿಯವರಿಗೆ ಅವಶ್ಯಕ ತರಬೇತಿ. – **ದಾನಮ್ಮ ಹೊಳಿ. ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ ಬಾಗಲಕೋಟ.**

ಜೀವನದಲ್ಲಿ ಗುರಿಸಾಧನೆಗಾಗಿ ಉತ್ತಮ ತಳಹದಿಯಾಗಿದೆ. – **ಜಗದೇವಿ ಎಸ್. ಗಟ್ಟಿ ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ಗುಲ್ಬರ್ಗಾ**

ವ್ಯವಸ್ಥಿತ ತರಬೇತಿಯಿಂದ ಕಾರ್ಯಕ್ರಮದ ವ್ಯವಸ್ಥೆಮಾಡುವುದನ್ನು ಕಲಿಯಲು ಅವಕಾಶವಾಯಿತು. – **ಲಕ್ಷ್ಮಣ ಮಹಾಲಕ್ಷ್ಮೀ ಮಹಿಳಾ ಸೌಹಾರ್ದ ಸಹಕಾರಿ ಸೋಂತ ಗುಲ್ಬರ್ಗಾ**

ತರಬೇತಿ ಬಹಳ ಒಳ್ಳೆಯ ದಾಗಿತ್ತು. – **ಭೀಮಾ ಮೇಗಳಮನಿ ಶ್ರೀ ಕರುನಾಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ಹನುಮನಾಳ**

ನನ್ನ ಆತ್ಮ ಸ್ಥೈರ್ಯ ಹೆಚ್ಚಿಸಲು ಸಹಕಾರಿಯಾಗಿದೆ. ಉತ್ತಮ ಪ್ರೇರಣೆ ಯಾಗಿದೆ. ಕಾರ್ಯಸಾಧಿಸುವ ಛಲ ಹೆಚ್ಚಿಸಿದೆ. – **ಶ್ರೀನಾಥ ನವಕಲ್ಯಾನ ಕರ್ನಾಟಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ ಬೆಂಗಳೂರು**

ಉತ್ತಮ ಸಹಕಾರಿ ವ್ಯಕ್ತಿಯಾಗಲು ಸಹಕಾರಿಯಾಯಿತು. – **ಸುರೇಶ ಎಸ್.ಹುನಶಿಕಟ್ಟಿ ಕಿತ್ತೂರು ರಾಣಿ ಚೆನ್ನಮ್ಮ ಉರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಬೈಲಹೊಂಗಲ**

ಈ ತರಬೇತಿ ನನ್ನ ವ್ಯಯಕ್ತಿಕ ಬೆಳವಣಿಗೆಗೆ ಉತ್ತಮ ಅವಕಾಶವಾಯಿತು. – **ಮಲ್ಲಿಕಾರ್ಜುನ.ಪಿ.ಜಮಾದಾರ ಲಕ್ಷ್ಮೀ ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ತಡಕಲ್. ಗುಲ್ಬರ್ಗಾ.**

ನಮ್ಮ ಸಹಕಾರಿಯ ಅಭಿವೃದ್ಧಿಗೆ ಪೂರಕವಾಗುವ ಅಂಶಗಳನ್ನು ಕಲಿಯಲು ಸಹಕಾರಿಯಾಗಿದೆ. – **ಭಾಗ್ಯಶ್ರೀ. ಸ್ವಾಮಿ. ಆಸ್ಥಾ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ಗುಲ್ಬರ್ಗಾ.**

ವ್ಯಕ್ತಿವಿಕಸನದ ಯಶಸ್ವಿ ತರಬೇತಿ ಇದಾಗಿತ್ತು. – **ಎಸ್. ಎಮ್.ವಿಜಯಕುಮಾರ. ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪ.ಲಿ. ಸಾಗರ ಶಿವಮೊಗ್ಗ.**

ವ್ಯವಸ್ಥಿತ ತರಬೇತಿ ಅನುಕರಣೀಯವಾಗಿತ್ತು. – **ವಿನೋದಕುಮಾರ ಅಸ್ಪಗೀಕರ. ಶ್ರೀ ಶರಣ ಶಬರೀಶ ಸೌಹಾರ್ದ ಸಹಕಾರಿ ಗುಲ್ಬರ್ಗಾ**

ಯಾವುದೇ ತರಬೇತಿ ಕಾರ್ಯಕ್ರಮಗಳಲ್ಲಿ ಕಾಣದ ಶಿಸ್ತು, ವ್ಯವಸ್ಥೆ,ವಿಷಯಗಳ ಬಗ್ಗೆ ಮಾಹಿತಿಯನ್ನು ಈ ತರಬೇತಿಯಲ್ಲಿ ಪಡೆಯಲು ಸಾಧ್ಯವಾಗಿದೆ. – **ಭೀಮಪ್ಪ ಶೋಕರೆ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ಬಳೆಗೇರಿ ಬೆಳಗಾಗಿ ಜಿಲ್ಲೆ.**

ವ್ಯಕ್ತಿತ್ವ ವಿಕಸನ ತರಬೇತಿ ಯಲ್ಲಿ ಯೋಗವನ್ನು ಸಹ ಅಳವಡಿಸಿದ್ದು ಉತ್ತಮ ವಾಗಿತ್ತು. – **ಮುತ್ತನಗೌಡ ಭೀಮನಗೌಡ ಗೌಡರ.**

ನನ್ನ ಸಹಕಾರಿ ಏಳ್ಗೆಗೆ ಶ್ರಮಿಸಲು ಉತ್ತಮ ಮಾಹಿತಿ ದೊರೆತಿದೆ. – **ಕಾಶೀಂ ಪಟೇಲ್ ಮಹಾಸ್ವಾಮಿ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ, ಯಾದಗೀರಿ**

ನನ್ನ ವ್ಯಕ್ತಿತ್ವ ವಿಕಸನಕ್ಕೆ ಉತ್ತಮ ಅವಕಾಶ ವಾಯಿತು. – **ರಘುನಂದನ ಮೈಲಾಪುರ. ಶ್ರೀರಕ್ಷ ಕ್ರೆಡಿಟ್ ಸೌಹಾರ್ದ ಸಹಕಾರಿ ಸಿಂದನೂರ.**

ಒಬ್ಬ ಸಹಕಾರಿ ಕಾರ್ಯಕರ್ತನಾಗಲು ಅವಶ್ಯಕ ತರಬೇತಿ ಇದಾಗಿತ್ತು. – **ಆರ್.ಸುಭಾಶಿಣಿ, ವಾಸವಿ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ ಕೊಳ್ಳೇಗಾಲ.**

ತರಬೇತಿ ಕಾರ್ಯಕ್ರಮ ಅತ್ಯಂತ ಪರಿಣಾಮಕಾರಿಯಾಗಿತ್ತು. – **ಮಾಣಿಕಪ್ಪ.ಆರ್.ಎಮ್ ಶ್ರೀ ದೇವರ ದಾಸೀಮಯ್ಯ ಸೌಹಾರ್ದ ಸಹಕಾರಿ ನಿ ಕಮಲಾಪುರ ಗುಲ್ಬರ್ಗಾ**

ಜೀವನದ ಸಾರ್ಥಕತೆಗೆ ಅವಶ್ಯಕವಾದ ವಿಷಯಗಳು. ಕಲ್ಲು ಬಂಡೆಯನ್ನು ಮೂರ್ತಿಯನ್ನಾಗಿಸುವ ತರಬೇತಿ ವ್ಯವಸ್ಥೆ. – **ಎಸ್.ಎಮ್.ಕಳ್ಳಿಗುಡ್ಡ ಬಾಪೂಜಿ ಸೌಹಾರ್ದ ಸಹಕಾರಿ ಬಾಗಲಕೋಟ.**

ಅತ್ಯಂತ ಉತ್ತಮ ತರಬೇತಿ ಇದಾಗಿತ್ತು. – **ಉಮರ ಫಾರೂಕ್. ಅಭಿವೃದ್ಧಿ ಪತ್ತಿ ಸೌಹಾರ್ದ ಸಹಕಾರಿ ಹಟ್ಟಿ.**

# ರಾಜ್ಯದಾದ್ಯಂತ 23 ಕೇಂದ್ರಗಳಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಯಶಸ್ವಿ ಸಭೆ

ಪ್ರತಿವರ್ಷದಂತೆ 2013ನೇ ಸಾಲಿನಲ್ಲಿ ರಾಜ್ಯದ 24 ಕೇಂದ್ರಗಳಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಗಳನ್ನು ಆಯೋಜಿಸಲಾಗಿತ್ತು. ಕಾರವಾರದಲ್ಲಿ ದ್ವಾರಕಾ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ಆರ್.ನಾಯಕರವರು ಹಂತಕರ ಗುಂಡಿಗೆ ಬಲಿಯಾಗಿ ನಿಧನ ಹೊಂದಿದ ಪ್ರಯುಕ್ತ ಸಭೆಯನ್ನು ಮುಂದೂಡಲಾಗಿದೆ. ಉಳಿದಂತೆ ನಡೆದ ಎಲ್ಲ ಸಭೆಗಳು ಯಶಸ್ವಿಯಾಗಿ ನಡೆದು ರಾಜ್ಯದ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಪೂರಕವಾಗಿದೆ. ಸಾಂಪ್ರದಾಯಿಕವಾಗಿ ಎಲ್ಲ ಕಾರ್ಯಕ್ರಮಗಳಲ್ಲಿ ಉದ್ಘಾಟನೆ ಹಾಗೂ ಸಮಾರೋಪ ಕಾರ್ಯಕ್ರಮಗಳ ವ್ಯವಸ್ಥೆಮಾಡಲಾಗಿತ್ತು. ಸ್ಥಳಿಯ ಸಹಕಾರಿ ಗಣ್ಯರಿಗೆ ಹಾಗೂ ಸಹಕಾರಿ ಇಲಾಖೆಯ ಅಧಿಕಾರಿಗಳಿಗೆ ಮಾಧ್ಯಮ ದವರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಪರಿಚಯಿಸುವ ಹಾಗೂ ಅಭಿವೃದ್ಧಿಯ ಬಗ್ಗೆ ಸಲಹೆ ಮಾರ್ಗದರ್ಶನ ಪಡೆಯುವ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಿಗೆ ಮತ್ತು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ವ್ಯಾಪಕ ಪ್ರಚಾರ ನೀಡುವುದಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು.

## ಮುಖ್ಯ ಕಾರ್ಯನಿರ್ವಾಹಕರ ಸಭೆಗಳಲ್ಲಿ ಭಾಗವಹಿಸಿದ್ದ ಗಣ್ಯರ ಅಭಿಪ್ರಾಯಗಳು

01 ಚುನಾವಣೆಯ ಗುಣಾತ್ಮಕತೆ ಹೆಚ್ಚಿಸುವಲ್ಲಿ ಸೌಹಾರ್ದ ಸಹಕಾರಿಗಳು ಮಾದರಿಯಾಗ ಬೇಕು – **ಶ್ರೀ ಎನ್.ಸಿ.ಮುನಿಯಪ್ಪ, ಮಾನ್ಯ ಚುನಾವಣಾ ಆಯುಕ್ತರು, ಸಹಕಾರ ಚುನಾವಣಾ ಆಯೋಗ.**

02 ಯಶಸ್ಸಿನಿಂದಲೇ ಕಾಯ್ದೆಯ ಸಾರ್ಥಕತೆ ಸಾಧ್ಯ – **ಶ್ರೀ ಬಿ.ಹೆಚ್. ಮಂಜಪ್ಪ, ಕಾರ್ಯದರ್ಶಿಗಳು, ಸಹಕಾರ ಚುನಾವಣಾ ಆಯೋಗ.**

03 ಸಹಕಾರಿ ಸಂಸ್ಥೆಗಳನ್ನು ಎರಡು ವರ್ಗಗಳನ್ನಾಗಿ ವಿಂಗಡಿಸಲು ಸರ್ಕಾರಕ್ಕೆ ಆಗ್ರಹ – **ಶ್ರೀ ಗುರುನಾಥ ಜ್ಯಾಂತಿಕರ ಅಧ್ಯಕ್ಷರು ಸಂಯುಕ್ತ ಸಹಕಾರಿ.**

04 ಸೌಹಾರ್ದ ಸಹಕಾರಿ ಚಳುವಳಿಯು ಸಹಕಾರ ಕ್ಷೇತ್ರವನ್ನು ಚೇತರಿಸಿದೆ. – **ಶ್ರೀ ಗುರುನಾಥ ಜ್ಯಾಂತಿಕರ ಅಧ್ಯಕ್ಷರು ಸಂಯುಕ್ತ ಸಹಕಾರಿ.**

05 ಸ್ವಾಯತ್ತತೆ ಸ್ವಯಂ ಆಡಳಿತ ಸ್ವಯಂ ನಿಯಂತ್ರಣದಿಂದಾಗಿ ಸೌಹಾರ್ದ ಸಹಕಾರಿ ಗಳ ಬೆಳವಣಿಗೆ. – **ಶ್ರೀ ರಾವ ಸಾಹೇಬ ಅಣ್ಣಾಸಾಹೇಬ ಪಾಟೀಲ ಸಂಯುಕ್ತ ಸಹಕಾರಿ ನಿರ್ದೇಶಕರು.**

06 ಸೌಹಾರ್ದ ಸಹಕಾರಿಗಳ ಬೆಳವಣಿಗೆಯ ವೇಗ ಸಹಕಾರ ಕ್ಷೇತ್ರಕ್ಕೆ ಸ್ಫೂರ್ತಿಯಾಗಲಿ – **ಶ್ರೀ ಹೆಚ್.ವಿ.ರಾಜೀವ್, ಉಪಾಧ್ಯಕ್ಷರು ಸಂಯುಕ್ತ ಸಹಕಾರಿ**

07 ಯುವ ಹಾಗೂ ದಕ್ಷ ಮುಖ್ಯ ಕಾರ್ಯನಿರ್ವಾಹಕರು ಸಹಕಾರಿ ಕ್ಷೇತ್ರಕ್ಕೆ ಅಗತ್ಯ – **ಶ್ರೀ ಎಸ್.ಆರ್. ಸತೀಶ್ಚಂದ್ರ. ನಿರ್ದೇಶಕರು ಸಂಯುಕ್ತ ಸಹಕಾರಿ.**

08 ಗ್ರಾಮೀಣ ಅಭಿವೃದ್ಧಿಗೆ ಸೌಹಾರ್ದ ಸಹಕಾರಿಗಳು ಕಲ್ಪವೃಕ್ಷವಾಗಿವೆ. – **ಶ್ರೀ ರಾವಸಾಹೇಬ ಪಾಟೀಲ ಅಣ್ಣಾಸಾಹೇಬ ಸಂಯುಕ್ತ ಸಹಕಾರಿ, ನಿರ್ದೇಶಕರು.**

09 ಸಂಯುಕ್ತ ಸಹಕಾರಿಯಿಂದ ಸೌಹಾರ್ದ ಸಹಕಾರಿಗಳಿಗೆ ಗುಣಮಟ್ಟದ ತರಬೇತಿ – **ಶ್ರೀ ಹೆಚ್. ವೈ ಗದ್ದನಕೇರಿ, ಉಪನಿಬಂಧಕರು.**

10 ಸಹಕಾರ ಕಾಯ್ದೆಗಳ ತಿದ್ದುಪಡಿಯಿಂದಾಗಿ ವ್ಯತ್ಯಾಸಗಳು ಕಡಿಮೆಯಾಗಿರುವ ಈ ಸಂದರ್ಭದಲ್ಲಿ ಸೌಹಾರ್ದಗಳ ಜವಾಬ್ದಾರಿ ಹೆಚ್ಚಿದೆ – **ಶ್ರೀ ಹೆಚ್. ಬಾಲಶೇಖರ್, ಉಪನಿಬಂಧಕರು.**

